ಗುಣಾತ್ಮಕ ಶಿಕ್ಷಣಕ್ಕಾಗಿ ಕ್ರಿಯಾಶೀಲ ಆಡಳಿತ

# ಆಯುಕ್ತರ ಕಾರ್ಯಾಲಯ, ಸಾರ್ವಜನಿಕ ಶಿಕ್ಷಣ ಇಲಾಖೆ,

**ರೊದ್ದ ರಸ್ತೆ, ಧಾರವಾಡ-580 008**

ಸಂಖ್ಯೆಃಜಿ3ಃಶಾಶಿಅಃಹೊಪ್ರಾಶಾಃಆಮಾಃ68ಃ2012-13 ದಿನಾಂಕ: 30-01-2013

4659

ನಮೂನೆ-2

(ನಿಯಮ 3 ಉಪನಿಯಮ 5 (ಬಿ))

ಯಮಕನಮರಡಿ ವಿದ್ಯಾವರ್ಧಕ ಸಂಘ ಯಮಕನಮರಡಿ ತಾ: ಹುಕ್ಕೇರಿ ಈ ಆಡಳಿತ ಮಂಡಳಿಯವರಿಗೆ ಕರ್ನಾಟಕ ಶಿಕ್ಷಣ ಕಾಯ್ದೆ 1983 (ಕರ್ನಾಟಕ ಆ್ಯಕ್ಟ 1-1995) ಸೆಕ್ಷನ್ 30-31 ರಂತೆ ಈ ದಿನ ದಿನಾಂಕ:30-01-2013 ರಂದು ಈ ಕೆಳಗೆ ನಮೂದಿಸಿರುವ ಶಿಕ್ಷಣ ಸಂಸ್ಥೆಯನ್ನು ಹುಕ್ಕೇರಿ ತಾಲೂಕ ಯಮಕನಮರಡಿ ಗ್ರಾಮದ ಆಸ್ತಿ ನಂ 1627 ಇಲ್ಲಿ ನಡೆಸಲು ನೋಂದಾಯಿಸಲಾಗಿದೆ ಎಂದು ಪ್ರಮಾಣೀಕರಿಸಲಾಗಿದೆ.

| | | |
|---|---|---|
| 1. | ಜಿ.ಎಸ್ ಸಿ ಸ್ವೀಕೃತಿ ರಸೀದಿ ಸಂಖ್ಯೆ ಹಾಗೂ ದಿನಾಂಕ: | ಇಡಿ 099-00000-11889 ದಿನಾಂಕ:30-10-2012 |
| 2. | ಕ್ರಮ ಸಂಖ್ಯೆ : | 309/11/2013-14 |
| 3. | ಪ್ರಾಥಮಿಕ ಶಾಲೆಯ ಹೆಸರು : | ಯಮಕನಮರಡಿ ವಿದ್ಯಾವರ್ಧಕ ಸಂಘ ಯಮಕನಮರಡಿಯ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ ಯಮಕನಮರಡಿ ತಾ:ಹುಕ್ಕೇರಿ ಜಿ:ಬೆಳಗಾವಿ |
| 4. | ಶಿಕ್ಷಣ ಸಂಸ್ಥೆಯ ವರ್ಗೀಕರಣ : | ಪ್ರಾಥಮಿಕ ಶಿಕ್ಷಣ (ಸಹ ಶಿಕ್ಷಣ) |
| 5. | ಅನುಮತಿ ನೀಡಿದ ತರಗತಿ : | 6 ನೇ ತರಗತಿ : 2013-14 ನೇ ಸಾಲಿನಲ್ಲಿ.<br>7 ನೇ ತರಗತಿ : 2014-15 ನೇ ಸಾಲಿನಲ್ಲಿ.<br>8 ನೇ ತರಗತಿ : 2015-16 ನೇ ಸಾಲಿನಲ್ಲಿ. |
| 6. | ಅನುಮತಿ ನೀಡಿದ ಮಾಧ್ಯಮ : | ಆಂಗ್ಲ ಮಾಧ್ಯಮ |
| 7. | ಶುಲ್ಕ ಪಾವತಿ ಮಾಡಿರುವುದು : | ರೂ. 10,000-00 ಪಾವತಿ ಮಾಡಿರುತ್ತಾರೆ.<br>ಸಿಂಡಿಕೇಟ ಬ್ಯಾಂಕ ಯಮಕನಮರಡಿ<br>ಡಿ ಡಿ ಸಂಖ್ಯೆ: 349704 ದಿನಾಂಕ: 22-10-2012 |

ಸದರಿ ಶಿಕ್ಷಣ ಸಂಸ್ಥೆಯನ್ನು ಕ್ರಮ ಸಂಖ್ಯೆ: : 309/11/2013-14 ಪುಟ ಸಂಖ್ಯೆ:23 ವಾಲ್ಯೂಮ ಸಂಖ್ಯೆ:02 ರಲ್ಲಿ ಈ ಕಛೇರಿಯಲ್ಲಿನ ಶೈಕ್ಷಣಿಕ ಸಂಸ್ಥೆಗಳ ನೋಂದಣಿ ವಹಿಯಲ್ಲಿ ನೋಂದಾಯಿಸಲಾಗಿದೆ. ಈ ಪ್ರಮಾಣ ಪತ್ರವನ್ನು ಕರ್ನಾಟಕ ಶಿಕ್ಷಣ ಮಸೂದೆ 1983 ರಡಿ ಈ ಕೆಳಕಂಡ ಷರತ್ತಿಗೊಳಪಟ್ಟು ನೀಡಲಾಗಿದೆ.

1. ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳ (ವರ್ಗೀಕರಣ ಹಾಗೂ ನೋಂದಣಿ) ನಿಯಮಗಳು, 1997 ರ ನಿಯಮ 3, 4 ಮತ್ತು 5 ಕ್ಕೆ ಒಳಪಟ್ಟಿರುತ್ತದೆ.
2. **ಸರ್ಕಾರದ ಆದೇಶ ಸಂಖ್ಯೆ: ಇಡಿ 91 ಮಾಹಿತಿ 2012 ದಿನಾಂಕ: 15-11-2012 ರಂತೆ ಈ ನೋಂದಣಿಯು ಕರ್ನಾಟಕ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ನಿಯಮಗಳು 2012 ಹಾಗೂ ಸದರಿ ಆದೇಶದಡಿಯಲ್ಲಿ ಕಾಲಕಾಲಕ್ಕೆ ಶಾಲಾ ಶಿಕ್ಷಣ ಪದ್ಧತಿಯ ಬದಲಾವಣೆ ಕುರಿತು ರೂಪಿಸಲಾಗುವ ನಿಯಮಗಳನ್ನು ಪಾಲನೆ ಮಾಡುವ ಷರತ್ತಿಗೆ ಒಳಪಟ್ಟಿರುತ್ತದೆ.**
3. ಸಂಸ್ಥೆಯ ಆಡಳಿತ ಮಂಡಳಿಯು ಮೇಲೆ ತಿಳಿಸಿರುವ ನಿಯಮಗಳಂತೆ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಬೇಕು..
4. ಶಾಲಾ ನಿವೇಶನ, ವಿಸ್ತೀರ್ಣ, ಕಟ್ಟಡ, ಪಾಠ, ಪೀಠೋಪಕರಣಗಳು, ಸಿಬ್ಬಂದಿ ವರ್ಗ ಆರ್ಥಿಕ ಅನುಕೂಲತೆಗಳು ಮುಂತಾದವುಗಳನ್ನು ಒದಗಿಸುವ ಷರತ್ತಿಗೆ ಒಳಪಟ್ಟಿರುತ್ತದೆ.
5. ಸದರಿ ಶಿಕ್ಷಣ ಸಂಸ್ಥೆಯು ಯಾವುದೇ ಸಂದರ್ಭದಲ್ಲಿಯೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹೆಚ್ಚಿನ ವಿಭಾಗಗಳನ್ನು ತೆರೆಯುವಂತಿಲ್ಲ.
6. ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ, ಅದೇ ಸರ್ವೇ ನಂಬರ್‌ನಲ್ಲಿ ಮಾತ್ರ ತೆರೆಯತಕ್ಕದ್ದು ಹಾಗೂ ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.
7. ಯಾವ ಆಡಳಿತ ಮಂಡಳಿಗೆ ಶಾಲೆ ನಡೆಸಲು ಅನುಮತಿ ನೀಡಲಾಗಿದೆಯೋ ಅದೇ ಮಂಡಳಿಯು ಅದೇ ಸ್ಥಳದಲ್ಲಿಯೇ ಮತ್ತು ಅದೇ ಹೆಸರಿನಲ್ಲಿ ನಡೆಸತಕ್ಕದ್ದು.
8. ಶಿಕ್ಷಣ ಸಂಸ್ಥೆಯವರು ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಹಾಗೂ ಆಗಿಂದಾಗ್ಗೆ ಹೊರಡಿಸುವ ಎಲ್ಲ ಸರ್ಕಾರಿ ಆದೇಶಗಳು ಹಾಗೂ ನಿಯಮಗಳನ್ನು ಪಾಲಿಸತಕ್ಕದ್ದು. ಕರ್ನಾಟಕ ಶಿಕ್ಷಣ ಮಸೂದೆ 1983 (ಕರ್ನಾಟಕ ಆ್ಯಕ್ಟ ಸಂಖ್ಯೆ: 1:95) ಇದರಡಿಯಲ್ಲಿ ಬರುವ ಕಾಯ್ದೆಗಳನ್ನು ಮತ್ತು ಅದರಡಿಯಲ್ಲಿ ರಚಿಸಲಾಗಿರುವ ನಿಯಮಗಳನ್ನು ತಪ್ಪದೆ ಪಾಲಿಸತಕ್ಕದ್ದು.
9. ಈ ಪ್ರಾಥಮಿಕ ಶಾಲೆ ನೋಂದಣಿಯಂತೆ ಸರ್ಕಾರಿ ಅಧಿಸೂಚನೆ ಸಂಖ್ಯೆ: ಇಡಿ:175:ಪಿ.ಎಂ.ಸಿ:95, ದಿನಾಂಕ: 7–9–98 ಮತ್ತು ದಿನಾಂಕ: 29–12–98 ರ ಪ್ರಕಾರ **ಶಾಶ್ವತ ಅನುದಾನರಹಿತವಾಗಿರುತ್ತದೆ.**
10. ಆಡಳಿತ ಮಂಡಳಿಯು ಸರ್ಕಾರದಿಂದ ಯಾವುದೇ ಅನುದಾನವನ್ನು ಬಯಸುವುದಿಲ್ಲವೆಂದು ರೂ.20–00 ಛಾಪಾ ಕಾಗದದಲ್ಲಿ ನೋಟರಿಯವರ ಮುಂದೆ ಪ್ರಮಾಣೀಕರಿಸಿದ ಒಪ್ಪಿಗೆ ಪತ್ರವನ್ನು ನೀಡುವುದು.
11. ಇಲಾಖೆ ಹಾಗೂ ಸರ್ಕಾರ ನಿಗದಿ ಪಡಿಸಿದ ಪಠ್ಯಪುಸ್ತಕ, ಪರೀಕ್ಷಾ ಕ್ರಮಗಳನ್ನು ಮಾತ್ರ ತಪ್ಪದೇ ಅಳವಡಿಸತಕ್ಕದ್ದು.
12. ಸರ್ಕಾರಿ ಆದೇಶ ಸಂಖ್ಯೆ:ಇಡಿ 28 ಪಿಜಿಸಿ 94 ದಿನಾಂಕ: 29–4–94ರಂತೆ 1 ರಿಂದ 5 ನೇ ತರಗತಿಯವರೆಗೆ ಕನ್ನಡ ಅಥವಾ ಮಕ್ಕಳ ಮಾತೃಭಾಷಾ ಮಾಧ್ಯಮದಲ್ಲಿ ನಡೆಸಿ ಭಾಷಾ ನೀತಿ ಪಾಲಿಸುತ್ತಿರುವ ಶಾಲೆಗಳಿಗೆ 6ನೇ ತರಗತಿಯಿಂದ ಆಂಗ್ಲ ಮಾಧ್ಯಮಕ್ಕೆ ಮೇಲ್ದರ್ಜೆಗೇರಿಸಿ ನೋಂದಾಯಿಸಲಾಗಿದೆ. ಭಾಷಾ ನೀತಿಗೆ ಒಳಪಟ್ಟು ನೋಂದಣಿಯಾಗಿರುವ ಶಾಲೆಗಳಲ್ಲಿ ಭಾಷಾ ನೀತಿಯನ್ನು ಉಲ್ಲಂಘಿಸಿರುವುದು ಸರ್ಕಾರದ/ಇಲಾಖೆಯ/ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಗಮನಕ್ಕೆ ಬಂದಲ್ಲಿ ನಿಯಮಗಳನ್ವಯ ಸದರಿ ಶಾಲೆಯ ಅನುಮತಿ ಮತ್ತು ನೋಂದಣಿಯನ್ನು ರದ್ದುಪಡಿಸಲಾಗುವದು.
13. ಭಾಷಾ ನೀತಿ ಉಲ್ಲಂಘನೆ ಮಾಡಿದ ಶಾಲೆಗಳು ಸ್ವ ಇಚ್ಛೆ ಯೋಜನೆಯಡಿ ಅವಕಾಶ ಹೊಂದಿದ ಶಾಲೆಗಳು ನ್ಯಾಯಾಲಯದ ಆದೇಶ ಮತ್ತು ಸರ್ಕಾರದ ಆದೇಶ ಮಾರ್ಪಡಿಸಿದಲ್ಲಿ ಆ ಷರತ್ತಿಗೆ ಒಳಪಟ್ಟಿರುತ್ತವೆ.
14. ಶಾಲೆಯನ್ನು ಪ್ರಾರಂಭಿಸಲು ಸಂಸ್ಥೆಯವರು ಭದ್ರತಾ ಠೇವಣಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಾಗೂ ಆಡಳಿತ ಮಂಡಳಿಯ ಕಾರ್ಯದರ್ಶಿಗಳ ಜಂಟಿ ಖಾತೆಯಲ್ಲಿ ಇಡತಕ್ಕದ್ದು.
15. ಅನುಮತಿ ನೀಡಿದ ಪ್ರತಿಯೊಂದು ತರಗತಿಯಲ್ಲಿ ಮಕ್ಕಳ ಹಾಗೂ ಶಿಕ್ಷಕರ ಅನುಪಾತವನ್ನು ನಿಯಮಾನುಸಾರ ಇರತಕ್ಕದ್ದು. ಪ್ರತಿ ತರಗತಿಯಲ್ಲಿ ದಾಖಲಾತಿ 50 ಹಾಗೂ ಹಾಜರಾತಿ 40 ಇರತಕ್ಕದ್ದು.

16. ಕರ್ನಾಟಕ ಶಿಕ್ಷಣ ಮಸೂದೆ ಅನುಚ್ಛೇದ 8 ರ ಅಡಿಯಲ್ಲಿ ಉಪಬಂಧ 36-39 ರಂತೆ ನೊಂದಾಯಿಸಿದ ಎಲ್ಲ ಶಾಲೆಗಳು ರೆಕಗ್ನೇಷನ್ ಹಾಗೂ ಪ್ರಾವಿಜನಲ್ ರೆಕಗ್ನೇಷನ್ ವ್ಯಾಪ್ತಿಗೆ ಬರುವುದು.
17. ಪ್ರತಿ ವರ್ಷವೂ ವಿದ್ಯಾರ್ಥಿಗಳ ವೈದ್ಯಕೀಯ ಪರೀಕ್ಷೆಯನ್ನು ನಿಯಮಾನುಸಾರ ಮಾಡಿಸತಕ್ಕದ್ದು.
18. ಶಾಲಾ ಕೆಲಸದ ವೇಳೆ ಮತ್ತು ದಿನಗಳನ್ನು ಇಲಾಖೆಯ ನಿಯಮಗಳಂತೆ ಪಾಲಿಸತಕ್ಕದ್ದು.
19. ಶಾಲೆ ತೆರೆದ ಬಗ್ಗೆ ಹಾಗೂ ವಿದ್ಯಾರ್ಥಿಗಳ ದಾಖಲಾತಿಯನ್ನು, ಶಾಲೆ ನೋಂದಣೆಯಾದ ಅಥವಾ ಶೈಕ್ಷಣಿಕ ವರ್ಷ ಪ್ರಾರಂಭವಾದ ಎರಡು ತಿಂಗಳ ಒಳಗಾಗಿ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ತಿಳಿಸಬೇಕು. ಒಂದು ವೇಳೆ ಶಾಲೆ ತೆರೆಯದಿದ್ದಲ್ಲಿ ಯಾವುದೇ ಷರತ್ತುಗಳನ್ನು ಪಾಲಿಸದಿದ್ದಲ್ಲಿ ಈ ಆದೇಶ ತಾನಾಗಿಯೇ ರದ್ದಾಗುವುದು.
20. ಶಾಲೆಯಲ್ಲಿ ಹೆಣ್ಣು ಮಕ್ಕಳಿಗೆ ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕವಾದ ಶೌಚಾಲಯದ ವ್ಯವಸ್ಥೆಯನ್ನು ಕಡ್ಡಾಯವಾಗಿ ಒದಗಿಸಬೇಕು ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ಒದಗಿಸಬೇಕು.
21. **ಶಾಲೆಯ ಕಟ್ಟಡ ಸುರಕ್ಷತೆಯ ಬಗ್ಗೆ, ಬೆಂಕಿ, ಬಿರುಗಾಳಿ, ವಿದ್ಯುತ್ ಅಪಘಾತ ಮುತಾಂದ ಅವಘಡಗಳಿಂದ ಸುರಕ್ಷಿತವಾಗಿರತಕ್ಕದ್ದು. ಮತ್ತು ನ್ಯಾಶನಲ್ ಬಿಲ್ಡಿಂಗ್ ಕೋಡ್ ಆಫ್ ಇಂಡಿಯಾ 2005 ರ ಪ್ರಕಾರ ಶಾಲಾ ಕಟ್ಟಡಗಳಲ್ಲಿ ಜಾಗೃತಿ ಕ್ರಮಗಳನ್ನು ತೆಗೆದುಕೊಳ್ಳಬೇಕು.**
22. **ಶಾಲೆಗಳಲ್ಲಿ ಅಗ್ನಿಶಾಮಕ ಯಂತ್ರ ಅಳವಡಿಸಿ ಎಲ್ಲ ಶಿಕ್ಷಕರಿಗೆ ಮತ್ತು ಇತರ ಸಿಬ್ಬಂದಿಗೆ ಅದರ ಉಪಯೋಗದ ಬಗ್ಗೆ ತರಬೇತಿ ನೀಡುವದು**
23. ಸಿಬಂದಿ ಮಾದರಿ ರಚನೆಯ ಪ್ರಕಾರ ಬೋಧಕ / ಬೋಧಕೇತರ ಸಿಬ್ಬಂದಿಗಳನ್ನು ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಅನುದಾನ ಇಲ್ಲದ ಪ್ರಾಥಮಿಕ ಮತ್ತು ಪ್ರಾಥಮಿಕ ಹಾಗೂ ಪದವಿ ಪೂರ್ವ ಶಿಕ್ಷಣ ಸಂಸ್ಥೆಗಳ ನೌಕರರ ಕೆಲವು ಸೇವಾ ಷರತ್ತು ಮತ್ತು ನಿಬಂಧನೆಗಳು) ನಿಯಮಗಳು, 2005 ರನ್ವಯ ದೊರಕಿಸಬೇಕಾದ ಎಲ್ಲ ಸೇವಾ ಸೌಲಭ್ಯಗಳನ್ನು ಸಿಬ್ಬಂದಿಗಳಿಗೆ ಲಭ್ಯವಾಗುವಂತೆ ಮಾಡತಕ್ಕದ್ದು.
24. ಸರಕಾರದ ಆದೇಶ ಸಂಖ್ಯೆ: ಇಡಿ 104 ಎಸ್ ಇ ಪಿ 2005 ದಿನಾಂಕ: 12-01-2006 ಹಾಗೂ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳ ಪ್ರಕಾರ ಶಾಲಾ ಶಿಕ್ಷಕರಿಗೆ ಸೇವಾ ಭದ್ರತೆ ಒದಗಿಸುವುದು, ಶಿಕ್ಷಕರ ಸೇವಾ ಪುಸ್ತಕ ನಿರ್ವಹಣೆ ಮಾಡುವುದು ಹಾಗೂ ನೇಮಕ ಮಾಡಿಕೊಂಡ ಶಿಕ್ಷಕರಿಗೆ ಕನಿಷ್ಟ ವೇತನ [ **ರೂ** 12500/-] ವನ್ನು ಬ್ಯಾಂಕ ಮೂಲಕ ಪಾವತಿಸತಕದ್ದು.
25. ಸರಕಾರದ ಆದೇಶ ಸಂಖ್ಯೆ: ಇಡಿ 104 ಎಸ್ ಇ ಪಿ 2005 ದಿನಾಂಕ:12-01-2006 ರಂತೆ ಸರ್ಕಾರಿ ಶಿಕ್ಷಣ ಸಂಸ್ಥೆಗಳಿಗೆ ನಿಗದಿಪಡಿಸಲಾದ ವಿದ್ಯಾರ್ಹತೆಯಂತೆ, ಅನುದಾನರಹಿತ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿನ ಹುದ್ದೆಗಳಿಗೂ ಕಡ್ಡಾಯವಾಗಿ ತರಬೇತಿ ಹೊಂದಿದ ಹಾಗೂ ಇಲಾಖೆಯ ನಿಯಮಗಳ ಪ್ರಕಾರ ಅರ್ಹ ವಿದ್ಯಾರ್ಹತೆ ಹೊಂದಿದ ಶಿಕ್ಷಕರನ್ನು ಮಾತ್ರ ನೇಮಕ ಮಾಡತಕ್ಕದ್ದು.
26. ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ: ಸಿ7[2]:ಪ್ರಾಶಿಅ:ಹೊಶಾಪ್ರಾ:ಅನು:1:2011-12 ದಿನಾಂಕ: 03-05-2012 ರಂತೆ ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆ ಪ್ರಕಾರ 1 ರಿಂದ 5 ನೇ ತರಗತಿಯ ಪ್ರಾಥಮಿಕ ಶಾಲೆಗಳಲ್ಲಿ ಪಿಯುಸಿ, ಟಿಸಿಎಚ್/ಡಿಇಡಿ ವಿದ್ಯಾರ್ಹತೆಯ ಶಿಕ್ಷಕರನ್ನು ಹಾಗೂ 6, 7 ಮತ್ತು 8 ನೇ ತರಗತಿಗಳಿಗೆ ತರಬೇತಿ ಹೊಂದಿದ ಪದವೀಧರ ಶಿಕ್ಷಕರನ್ನು (ಟಿಜಿಟಿ) ಕಡ್ಡಾಯವಾಗಿ ನೇಮಕ ಮಾಡತಕ್ಕದ್ದು. [ಬಿಎ, ಬಿಇಡಿ/ಬಿಎಸ್‌ಸಿ, ಬಿಇಡಿ]
27. ನಿಯಮಾನುಸಾರ ಆಂಗ್ಲ ಮಾಧ್ಯಮದಲ್ಲಿ ಅಧ್ಯಯನ ಮಾಡಿದ ಶಿಕ್ಷಕರನ್ನು ನೇಮಕ ಮಾಡಿಕೊಂಡಿದ್ದಲ್ಲಿ ಮಾತ್ರ ಶಾಲೆಯನ್ನು ಪ್ರಾರಂಭಿಸತಕ್ಕದ್ದು.
28. ಈ ಶಾಲಾ ನೊಂದಣಿಯನ್ನು 2013-14 ನೇ ಸಾಲಿಗೆ 6ನೇ ತರಗತಿ ಆಂಗ್ಲ ಮಾಧ್ಯಮದಲ್ಲಿ ಪ್ರಾರಂಭಿಸಲು ನೋಂದಾಯಿಸಿರುವುದರಿಂದ, 7ನೇ ತರಗತಿಯನ್ನು 2014-15 ನೇ ಸಾಲಿನಿಂದ ಹಾಗೂ 8 ನೇ ತರಗತಿಯನ್ನು ಸ್ವಾಭಾವಿಕ ಬೆಳವಣಿಗೆ ಆಧಾರದ ಮೇಲೆ 2015-16 ನೇ ಸಾಲಿನಿಂದ ಪ್ರಾರಂಭಿಸತಕ್ಕದ್ದು.
29. ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಯ ಮಂಜೂರಾತಿಯಿಂದ ಕನ್ನಡ ಮಾಧ್ಯಮದ 1 ರಿಂದ 8 ನೇ ತರಗತಿಗಳಿಗೆ ಯಾವುದೇ ರೀತಿ ಧಕ್ಕೆ ಬಾರದಂತೆ ನೋಡಿಕೊಳ್ಳುವುದು.

30. ಕರ್ನಾಟಕ ಶಿಕ್ಷಣ ಮಸೂದೆ ನಿಯಮಗಳ ಪ್ರಕಾರ ಶಾಲೆಗೆ ಬೇಕಾದ ಪೀಠೋಪಕರಣ, ಪಾಠೋಪಕರಣ, ಗ್ರಂಥಾಲಯ ಪುಸ್ತಕಗಳು ಆಟದ ಮೈದಾನ ಶಾಲಾ ಕಟ್ಟಡ ಮುಂತಾದ ಸೌಲಭ್ಯಗಳನ್ನು ಒಂದು ವರ್ಷದಲ್ಲಿ ಒದಗಿಸಿಕೊಳ್ಳತಕ್ಕದ್ದು. ಇಲ್ಲದಿದ್ದಲ್ಲಿ ನೋಂದಣಿಯನ್ನು ರದ್ದುಗೊಳಿಸಲಾಗುವುದು.
31. ಪ್ರಾರಂಬಿಸಲು ಉದ್ದೇಶಿಸಿರುವ ಶಾಲೆಯು ಬಾಡಿಗೆ ಕಟ್ಟಡ ಹೊಂದಿದ್ದಲ್ಲಿ, ಶಾಲೆ ಪ್ರಾರಂಭಿಸಲು ಉದ್ದೇಶಿಸಿರುವ ಶಾಲಾ ಕಟ್ಟಡ ಹಾಗೂ ಮೂಲಭೂತ ಸೌಕರ್ಯಗಳು ತೃಪ್ತಿಕರವಾಗಿರುವ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ದೃಢೀಕರಣ ಪಡೆದು ಶಾಲೆ ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳುವುದು.
32. ಆಡಳಿತ ಮಂಡಳಿಯು ಕನಿಷ್ಟ ರೂ, 5 ಲಕ್ಷ ನಗದು ಠೇವಣಿ ಅಥವಾ ಸಮ ಮೊತ್ತದ ಸ್ಥಿರಾಸ್ತಿಯನ್ನು ಶಾಶ್ವತವಾಗಿ ಹೊಂದಿರತಕ್ಕದ್ದು.
33. ಪ್ರತಿ ಶಿಕ್ಷಣ ಸಂಸ್ಥೆ ಪ್ರತಿ ವರ್ಷ ಚಾರ್ಟರ್ಡ್ ಅಕೌಂಟೆಂಟ್‌ರಿಂದ ಪ್ರಮಾಣೀಕೃತ ಲೆಕ್ಕ ಪತ್ರಗಳನ್ನು ಹೊಂದಿರತಕ್ಕದ್ದು.
34. ಶಾಲೆಯು ವಿದ್ಯಾರ್ಥಿಗಳ ಪ್ರವೇಶಗಳ ನಿಬಂಧನೆಗಳು ಮತ್ತು ವಿದ್ಯಾರ್ಥಿಗಳ ಶುಲ್ಕ ವಸೂಲಾತಿ ಈ ಬಗ್ಗೆ ಇರುವ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
35. ಶಾಲೆ ಮತ್ತು ಶಾಲಾ ಆವರಣ, ಶಾಲೆಗಳಲ್ಲಿಯ ಮಕ್ಕಳ ಪ್ರವೇಶ ದಾಖಲಾತಿಗಳು ಎಲ್ಲರಿಗೂ ಮುಕ್ತವಾಗಿರತಕ್ಕದ್ದು.
36. ಶಾಲಾ ಕಟ್ಟಡವು ಪರೀಕ್ಷೆಗಳು, ತರಬೇತಿ, ಜನಗಣತಿ ಇತ್ಯಾದಿ ಇಲಾಖಾ ಕಾರ್ಯಗಳಿಗೆ ಲಭ್ಯವಾಗಿರತಕ್ಕದ್ದು.
37. ಕರ್ನಾಟಕ ಶಿಕ್ಷಣ ಸಂಸ್ಥೆಗಳು [ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯಕ್ರಮಣ] ನಿಯಮಗಳು 1995 ರಲ್ಲಿ ತಿಳಿಸಿರುವ ಎಲ್ಲಾ ಸೌಲಭ್ಯಗಳನ್ನು ಒದಗಿಸತಕ್ಕದ್ದು.
38. ಈ ಎಲ್ಲಾ ನಿಬಂಧನೆಗಳನ್ನು ಎರಡು ತಿಂಗಳೊಳಗಾಗಿ ಪೂರೈಸಿ ಮಾನ್ಯತೆ ಕುರಿತು ಅರ್ಜಿಯನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು.
39. ಸದರಿ ಶಾಲೆಯಲ್ಲಿ ಕನ್ನಡ ಮಾಧ್ಯಮದ 6 ಮತ್ತು 7 ನೇ ತರಗತಿಗಳನ್ನು ಸಂಬಂಧಿಸಿದ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ನಡೆಸುವ ಕರಾರುಗಳಿಗೆ ಒಳಪಟ್ಟು ಈ ಶಾಲೆಗೆ ಅನುಮತಿಯನ್ನು ನೀಡಿದೆ.
40. ನೋಂದಣಿ ಪ್ರಸ್ತಾವನೆಯೊಡನೆ ಸಲ್ಲಿಸಿದ ದಾಖಲೆಗಳು ಸತ್ಯಕ್ಕೆ ದೂರವಾದದ್ದೆಂದು ಯಾವುದೇ ಸಂದರ್ಭದಲ್ಲಿ ಕಂಡು ಬಂದಲ್ಲಿ ಈ ನೋಂದಣಿ ರದ್ದುಪಡಿಸಲಾಗುವುದು.

ಸ್ಥಳ : ಧಾರವಾಡ
ದಿನಾಂಕ : 30-01-2013

**ಅಪರ ಆಯುಕ್ತರು,**
**ಸಾರ್ವಜನಿಕ ಶಿಕ್ಷಣ ಇಲಾಖೆ,**
**ಧಾರವಾಡ.**

ಗೆ,

1. ಅಧ್ಯಕ್ಷರು/ಕಾರ್ಯದರ್ಶಿಗಳು, ಯಮಕನಮರಡಿ ವಿದ್ಯಾವರ್ಧಕ ಸಂಘ ಯಮಕನಮರಡಿ ತಾ: ಹುಕ್ಕೇರಿ
2. ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆ
3. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಹುಕ್ಕೇರಿ ಜಿ:ಬೆಳಗಾವಿ
4. ಕಛೇರಿ ಪ್ರತಿ.

ಪ್ರತಿ ಗೌರವಪೂರ್ವಕವಾಗಿ ಮಾಹಿತಿಗಾಗಿ:

1. ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ ಬೆಳಗಾವಿ

# ಉಪನಿರ್ದೇಶಕರ ಕಾರ್ಯಾಲಯ, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಕ್ಕೋಡಿ

ಸಂಖ್ಯೆ: ಅನು1/ಶಾಶಿಅ:1–5ನೇ ವರ್ಗ::ಆಂಗ್ಲ:ಪರಿವರ್ತನೆ:ಯ.ಮರಡಿ::2018–19 ದಿನಾಂಕ: 10–07–2018

ನಮೂನೆ–4 3986

(ನಿಯಮ 7 ಉಪನಿಯಮ 3)

**ನೋಂದಣಿ ಮಾರ್ಪಾಡು ಪ್ರಮಾಣ ಪತ್ರ**

ಯಮಕನಮರಡಿ ವಿದ್ಯಾವರ್ಧಕ ಸಂಘ ಯಮಕನಮರಡಿ ತಾ::ಹುಕ್ಕೇರಿ ಜಿ:;ಬೆಳಗಾವಿ ಈ ಆಡಳಿತ ಮಂಡಳಿಯು ಈಗಾಗಲೇ ಸಕ್ಷಮ ಪ್ರಾಧಿಕಾರಿಗಳಾದ ಉಪನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ಚಿಕ್ಕೋಡಿ ಇವರಿಂದ ಈ ಕೆಳಕಂಡ ತರಗತಿಗಳನ್ನು ನಡೆಸಲು ಕರ್ನಾಟಕ ಶಿಕ್ಷಣ ಕಾಯ್ದೆ 1983 (ಕರ್ನಾಟಕ ಆ್ಯಕ್ಟ 1–1995) ಸೆಕ್ಷನ್ 30–31 ರಂತೆ ನೋಂದಾಯಿಸಲ್ಪಟ್ಟಿದೆ.

| | | |
|---|---|---|
| 1. | ಕೆ.ಜಿ.ಎಸ್ ಸ್ವೀಕೃತಿ ರಸೀದಿ ಸಂಖ್ಯೆ ಹಾಗೂ ದಿನಾಂಕ:<br>ಆನ್ ಲೈನ್ ಅಪ್ಲಿಕೇಶನ್ ನಂಬರ/ ದಿನಾಂಕ | ಇಡಿ099–00002–77487 ದಿನಾಂಕ 29–12–2015<br>014177, ದಿನಾಂಕ 19–12–2015. |
| 2. | ಕ್ರಮ ಸಂಖ್ಯೆ/ಅನುಮತಿ ನೀಡಿದ ವರ್ಷ : | 33 /2015–16 |
| 3. | ಪ್ರಾಥಮಿಕ ಶಾಲೆಯ ಹೆಸರು : | ಯಮಕನಮರಡಿ ವಿದ್ಯಾವರ್ಧಕ ಸಂಘದ ಕನ್ನಡ ಮಾಧ್ಯಮ ಕಿರಿಯ ಪ್ರಾಥಮಿಕ ಶಾಲೆ ಯಮಕನಮರಡಿ ತಾ:ಹುಕ್ಕೇರಿ |
| 4. | ಶಿಕ್ಷಣ ಸಂಸ್ಥೆಯ ವರ್ಗೀಕರಣ : | ಪ್ರಾಥಮಿಕ ಶಿಕ್ಷಣ (ಸಹ ಶಿಕ್ಷಣ) |
| 5. | ಅನುಮತಿ ನೀಡಿದ ತರಗತಿ : | 1 ರಿಂದ 5 ನೇ ತರಗತಿ |
| 6. | ಪ್ರಾರಂಭಿಸಬೇಕಾದ ವರ್ಷ : | 2016–17 ನೇ ಸಾಲಿನಿಂದ |
| 7. | ಅನುಮತಿ ನೀಡಿದ ಮಾಧ್ಯಮ : | ಕನ್ನಡ ಮಾಧ್ಯಮ |
| 8. | ಶುಲ್ಕ ಪಾವತಿ ಮಾಡಿರುವುದು : | ರೂ. 25,000–00 ಪಾವತಿ ಮಾಡಿರುತ್ತಾರೆ.<br>ವಿಜಯಬ್ಯಾಂಕ್ ಚಿಕ್ಕೋಡಿ<br>ಡಿ ಡಿ ಸಂಖ್ಯೆ: 423057 ದಿನಾಂಕ: 20–11–2015. |

ಹಾಗೂ ಅದರಂತೆ ಈ ಮೇಲಿನ ಆಡಳಿತ ಮಂಡಳಿಯು ಕರ್ನಾಟಕ ಶಿಕ್ಷಣ ಕಾಯ್ದೆ 1983 (ಕರ್ನಾಟಕ ಆ್ಯಕ್ಟ 1–1995) ಸೆಕ್ಷನ್ 31(5) ರ ಅಡಿಯಲ್ಲಿ ಅರ್ಜಿ ಸಲ್ಲಿಸಿ, ನಿಯಮ 31 ರ ಉಪನಿಯಮ (1) ರ ಪ್ರಕಾರ ತಮ್ಮ ಸಂಸ್ಥೆಯ ವತಿಯಿಂದ ಕನ್ನಡ ಮಾಧ್ಯಮದಲ್ಲಿ ನಡೆಯುತ್ತಿರುವ ಕಿರಿಯ ಪ್ರಾಥಮಿಕ ಶಾಲೆಯನ್ನು ಆಂಗ್ಲ ಮಾಧ್ಯಮಕ್ಕೆ ಪರಿವರ್ತಿಸಲು ಕೋರಿದ್ದಾರೆ.

ಆದ್ದರಿಂದ ಸಕ್ಷಮ ಪ್ರಾಧಿಕಾರಿಗಳಾದ ಉಪನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ಚಿಕ್ಕೋಡಿ ಇವರು ಈ ಹಿಂದೆ ನೀಡಿದ ಮೂಲ ಅನುಮತಿ/ನೋಂದಣಿ ಪ್ರಮಾಣ ಪತ್ರ ಅನು1/ಹೊಖಾಪ್ರಾಶಾ/ಯಮಕಮರಡಿ/ಆಂಗ್ಲ/2015–16/389 ದಿನಾಂಕ ದಿನಾಂಕ 21–04–2018 ರಲ್ಲಿನ ಆದೇಶವನ್ನು ಹಿಂಪಡೆದು ರದ್ದುಪಡಿಸಲಾಗಿದೆ.

**ಸರ್ಕಾರವು ಪತ್ರ ಸಂಖ್ಯೆ: ಇಡಿ 549 ಪಿಜಿಸಿ 2015 ದಿನಾಂಕ: 02-11-2015 ರನ್ವಯ 1 ರಿಂದ 5 ನೇ ತರಗತಿಯವರೆಗೆ ಆಂಗ್ಲ ಮಾಧ್ಯಮ ಶಾಲೆಗಳನ್ನು ಪ್ರಾರಂಭಿಸಲು ಅನುಮತಿ ನೀಡುವ ನೋಂದಣಿ ಪ್ರಾಧಿಕಾರಿಯನ್ನಾಗಿ ಮಾಡಿ ಅಧಿಕಾರವನ್ನು ಆಯಾಯ ಉಪನಿರ್ದೇಶಕರುಗಳಿಗೆ ಪ್ರತ್ಯಾಯೋಜಿಸಲಾಗಿದೆ.**

ಪ್ರಯುಕ್ತ ಈ ನೋಂದಣಿ ಮಾರ್ಪಾಡು ಪ್ರಮಾಣ ಪತ್ರವನ್ನು **ದಿನಾಂಕ:** 10-07-2018 ರಂದು ಈ ಕೆಳಗೆ ನಮೂದಿಸಿರುವ ಶಿಕ್ಷಣ ಸಂಸ್ಥೆಗೆ ನೋಂದಾಯಿಸಿ ಅನುಮತಿ ನೀಡಲಾಗಿದೆ.

| | | |
|---|---|---|
| 1. | **ನೋಂದಣಿ ಕ್ರಮ ಸಂಖ್ಯೆ :** | 01/2018-19 |
| 2. | **ಆಡಳಿತ ಮಂಡಳಿಯ ಹೆಸರು :** | **ಯಮಕನಮರಡಿ ವಿದ್ಯಾವರ್ಧಕ ಸಂಘ ಯಮಕನಮರಡಿ ತಾ::ಹುಕ್ಕೇರಿ ಜಿ::ಬೆಳಗಾವಿ** |
| 3. | **ಶಾಲೆಯ ಹೆಸರು :** | **ಬಿ ಬಿ ಹಂಜಿ ಇಂಟರ್‌ನ್ಯಾಷನಲ್ ಸ್ಕೂಲ ಯಮಕನಮರಡಿ ತಾ::ಹುಕ್ಕೇರಿ ಜಿ::ಬೆಳಗಾವಿ** |
| 4. | **ಶಿಕ್ಷಣ ಸಂಸ್ಥೆಯ ವರ್ಗೀಕರಣ :** | **ಪ್ರಾಥಮಿಕ ಶಿಕ್ಷಣ (ಸಹ ಶಿಕ್ಷಣ)** |
| 5. | **ಶೈಕ್ಷಣಿಕ ವರ್ಷವಾರು ಅನುಮತಿ ನೀಡಿದ ತರಗತಿಗಳು :** | **1 ರಿಂದ 5 ನೇ ತರಗತಿಗಳು**<br>**2018-19 ನೇ ಸಾಲಿನ ಶೈಕ್ಷಣಿಕ ವರ್ಷದಿಂದ** |
| 6. | **ಅನುಮತಿ ನೀಡಿದ ಮಾಧ್ಯಮ :** | **ಆಂಗ್ಲ ಮಾಧ್ಯಮ** |

**ಸದರಿ ಶಿಕ್ಷಣ ಸಂಸ್ಥೆಯನ್ನು ಕ್ರಮ ಸಂಖ್ಯೆ:01:2018-19 ಪುಟ ಸಂಖ್ಯೆ: 13-14 ವಾಲ್ಯೂಮ ಸಂಖ್ಯೆ :01 ರಲ್ಲಿ ಈ ಕಛೇರಿಯಲ್ಲಿನ ಶೈಕ್ಷಣಿಕ ಸಂಸ್ಥೆಗಳ ನೋಂದಣಿ ಮಾರ್ಪಾಡು ವಹಿಯಲ್ಲಿ ನೋಂದಾಯಿಸಲಾಗಿದೆ. ಈ ಪ್ರಮಾಣ ಪತ್ರವನ್ನು ಕರ್ನಾಟಕ ಶಿಕ್ಷಣ ಮಸೂದೆ 1983 ರಡಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ನೀಡಲಾಗಿದೆ.**

1. ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳ (ವರ್ಗೀಕರಣ ಹಾಗೂ ನೋಂದಣಿ) ನಿಯಮಗಳು, 1997 ರ ನಿಯಮ 3, 4 ಮತ್ತು 5 ಕ್ಕೆ ಒಳಪಟ್ಟಿರುತ್ತದೆ.
2. ಸರ್ಕಾರದ ಆದೇಶ ಸಂಖ್ಯೆ: ಇಡಿ 91 ಮಾಹಿತಿ 2012 ದಿನಾಂಕ: 15-11-2012 ರಂತೆ ಈ ನೋಂದಣಿಯು ಕರ್ನಾಟಕ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ನಿಯಮಗಳು 2012 ಹಾಗೂ ಸದರಿ ಆದೇಶದಡಿಯಲ್ಲಿ ಕಾಲಕಾಲಕ್ಕೆ ಶಾಲಾ ಶಿಕ್ಷಣ ಪದ್ಧತಿಯ ಬದಲಾವಣೆ ಕುರಿತು ರೂಪಿಸಲಾಗುವ ನಿಯಮಗಳನ್ನು ಪಾಲನೆ ಮಾಡುವ ಷರತ್ತಿಗೆ ಒಳಪಟ್ಟಿರುತ್ತದೆ.
3. ಈ ನೋಂದಣಿ ಮಾರ್ಪಾಡು ಆದೇಶವು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ದಿನಾಂಕ: 10-04-2015 ರಂದು ಹೊರಡಿಸಿದ ಅಧಿಸೂಚನೆ ಸಂಖ್ಯೆ: ಸಿ7[3]ಪ್ರಾಶಿಅ:ನ್ಯಾ.ಪ್ರ:19:2014-15 ರಲ್ಲಿ ನೀಡಲಾದ ಸೂಚನೆಗಳಿಗೆ ಒಳಪಟ್ಟಿರುತ್ತದೆ.
4. **2016-17 ನೇ ಸಾಲಿನಿಂದ 1 ರಿಂದ 5 ನೇ ತರಗತಿಯಲ್ಲಿ ಆಂಗ್ಲ ಮಾಧ್ಯಮದಲ್ಲಿ ಬೋಧಿಸಲು ಅನುಮತಿ ನೀಡಲಾಗುವ ಈ ಮಾರ್ಪಾಡು ನೋಂದಣಿ ಪ್ರಮಾಣ ಪತ್ರವು, ಸಂಸ್ಥೆಯವರು ಕರ್ನಾಟಕ ಶಿಕ್ಷಣ ಕಾಯ್ದೆ 1983 ರ ನಿಯಮಾವಳಿಗಳನ್ವಯ ನಮೂನೆ-3 ರಲ್ಲಿ ಅಗತ್ಯ ವಿವರಗಳನ್ನು ನಮೂದಿಸಿ ಈ ಹಿಂದೆ 1 ರಿಂದ 5 ನೇ ತರಗತಿ ಕನ್ನಡ ಮಾಧ್ಯಮದ ತರಗತಿಗಳನ್ನು ನಡೆಸಲು ಪಡೆದಿದ್ದ ಮೂಲ ನೋಂದಣಿ ಪ್ರಮಾಣ ಪತ್ರವನ್ನು ಹಿಂಪಡೆಯಲಾಗಿದೆ.**
5. ಆಂಗ್ಲ ಮಾಧ್ಯಮಕ್ಕೆ ಪರಿವರ್ತಿಸುವ ಎಲ್ಲಾ ತರಗತಿ / ವಿಭಾಗಗಳನ್ನು ಕರ್ನಾಟಕ ಶಿಕ್ಷಣ ಕಾಯ್ದೆಯಡಿಯಲ್ಲಿ ಹೊರಡಿಸಿರುವ ನೊಂದಣಿ ನಿಯಮಗಳನ್ವಯ ನೊಂದಣಿ ಮಾಡಿಸಿಕೊಳ್ಳತಕ್ಕದ್ದು.
6. **ಸಂಬಂಧಿಸಿದ ಸಂಸ್ಥೆ ಹೊಸ ಶಾಲೆಗೆ ಮಾನ್ಯತೆ ಕೋರುವಂತೆ ಹೊಸದಾಗಿ ಮಾನ್ಯತೆಯನ್ನು ಕೋರತಕ್ಕದ್ದು.**
7. ಸರ್ಕಾರದ ಆದೇಶ ಸಂಖ್ಯೆ:ಇಡಿ 369 ಪಿಜಿಸಿ 2014 ದಿ:11-11-2014 ರಂತೆ ಶಾಲಾ ನಿವೇಶನ, ವಿಸ್ತೀರ್ಣ, ಕಟ್ಟಡ, ಪಾಠೋಪಕರಣ, ಪೀಠೋಪಕರಣಗಳು, ಸಿಬ್ಬಂದಿ ವರ್ಗ, ಆರ್ಥಿಕ ಅನುಕೂಲತೆಗಳು ಮುಂತಾದವುಗಳನ್ನು ಒದಗಿಸುವ ಷರತ್ತಿಗೆ ಒಳಪಟ್ಟಿರುತ್ತದೆ. ಬಾಡಿಗೆ ಕಟ್ಟಡ ಹೊಂದಿದ್ದಲ್ಲಿ ನಿಯಮಾನುಸಾರ 30 ವರ್ಷಗಳ ವರೆಗೆ ಲೀಜ್ ಆಧಾರದ ಮೇಲೆ ಅನುಮತಿ ಪಡೆದು ನಡೆಸತಕ್ಕದ್ದು.
8. ಶಾಲೆಯನ್ನು ಪರಿವರ್ತನೆ ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ ಮಾತ್ರ ನಡಸತಕ್ಕದ್ದು ಹಾಗೂ ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.

9. ಯಾವ ಆಡಳಿತ ಮಂಡಳಿಗೆ ಶಾಲೆ ನಡೆಸಲು ಅನುಮತಿ ನೀಡಲಾಗಿದೆಯೋ ಅದೇ ಮಂಡಳಿಯು ಅದೇ ಸ್ಥಳದಲ್ಲಿಯೇ ಮತ್ತು ಅದೇ ಹೆಸರಿನಲ್ಲಿ ನಡೆಸತಕ್ಕದ್ದು.
10. ಶಾಲೆಯಲ್ಲಿ ವಿದ್ಯಾರ್ಥಿಗಳ ಸುರಕ್ಷತೆಯ ಬಗ್ಗೆ ಶಿಕ್ಷಣ ಇಲಾಖೆ ಮತ್ತು ಗೃಹ ಇಲಾಖೆಗಳು ಹೊರಡಿಸಿರುವ ಮಾರ್ಗಸೂಚಿಗಳನ್ವಯ ಎಲ್ಲಾ ಭದ್ರತಾ ಕ್ರಮಗಳನ್ನು ಕೈಕೊಳ್ಳತಕ್ಕದ್ದು. ಹಾಗೂ ಅಗತ್ಯಎಲ್ಲಾ ಭದ್ರತಾ ಉಪಕರಣಗಳನ್ನು ಕಡ್ಡಾಯವಾಗಿ ಅಳವಡಿಸತಕ್ಕದ್ದು.
11. ಶಾಲೆಯನ್ನು ಇಲಾಖೆಯ ಪೂರ್ವಾನುಮತಿ ಪಡೆಯದೇ ಬೇರೆ ಆಡಳಿತ ಮಂಡಳಿ/ಸಂಸ್ಥೆಗೆ ಪರಭಾರೆ ಮಾಡತಕ್ಕದ್ದಲ್ಲ.
12. ಶಾಲೆಯನ್ನು ಮುಚ್ಚುವಂತಹ ಸಂದರ್ಭ ಬಂದಾಗ, ಶಾಲೆಯನ್ನು ಮುಚ್ಚುವ ಮುನ್ನ ಇಲಾಖೆಯ ಪೂರ್ವಾನುಮತಿ ಪಡೆದು ಶಾಲೆಯಲ್ಲಿನ ಎಲ್ಲಾ ಶೈಕ್ಷಣಿಕ ದಾಖಲೆಗಳನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಸುಪರ್ಧಿಗೆ ನೀಡತಕ್ಕದ್ದು.
13. ಈ ಶಿಕ್ಷಣ ಸಂಸ್ಥೆಯವರು ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಹಾಗೂ ಆಗಿಂದಾಗ್ಗೆ ಹೊರಡಿಸುವ ಎಲ್ಲ ಸರ್ಕಾರಿ ಆದೇಶಗಳು ಹಾಗೂ ನಿಯಮಗಳನ್ನು ಪಾಲಿಸತಕ್ಕದ್ದು. ಕರ್ನಾಟಕ ಶಿಕ್ಷಣ ಮಸೂದೆ 1983 (ಕರ್ನಾಟಕ ಆ್ಯಕ್ಟ ಸಂಖ್ಯೆ: 1:95) ಇದರಡಿಯಲ್ಲಿ ಬರುವ ಕಾಯ್ದೆಗಳನ್ನು ಮತ್ತು ಅದರಡಿಯಲ್ಲಿ ರಚಿಸಲಾಗಿರುವ ನಿಯಮಗಳನ್ನು ತಪ್ಪದೆ ಪಾಲಿಸತಕ್ಕದ್ದು.
14. ಈ ಪ್ರಾಥಮಿಕ ಶಾಲೆಯ ನೋಂದಣಿಯು ಸರ್ಕಾರಿ ಅಧಿಸೂಚನೆ ಸಂಖ್ಯೆ: ಇಡಿ:175:ಪಿ.ಎಂ.ಸಿ:95, ದಿನಾಂಕ: 07–09–1998 ಮತ್ತು ದಿನಾಂಕ:29–12–1998 ರ ಪ್ರಕಾರ **ಶಾಶ್ವತ ಅನುದಾನರಹಿತವಾಗಿರುತ್ತದೆ**.
15. ಆಡಳಿತ ಮಂಡಳಿಯು ಸರ್ಕಾರದಿಂದ ಯಾವುದೇ ಅನುದಾನವನ್ನು ಬಯಸುವುದಿಲ್ಲವೆಂದು ರೂ. 100/– ಛಾಪಾಕಾಗದದಲ್ಲಿ ನೋಟರಿಯವರ ಮುಂದೆ ಪ್ರಮಾಣಿಕರಿಸಿದ ಒಪ್ಪಿಗೆ ಪತ್ರವನ್ನು ನೀಡುವುದು.
16. ಇಲಾಖೆ ಹಾಗೂ ಸರ್ಕಾರ ನಿಗದಿ ಪಡಿಸಿದ ಪಠ್ಯಪುಸ್ತಕ, ಪರೀಕ್ಷಾ ಕ್ರಮಗಳನ್ನು ತಪ್ಪದೇ ಅಳವಡಿಸತಕ್ಕದ್ದು.
17. ಅನುಮತಿ ನೀಡಿದ ಪ್ರತಿಯೊಂದು ತರಗತಿಯಲ್ಲಿ ಮಕ್ಕಳ ಹಾಗೂ ಶಿಕ್ಷಕರ ಅನುಪಾತ ನಿಯಮಾನುಸಾರಇರತಕ್ಕದ್ದು. ಪ್ರತಿ ತರಗತಿಯಲ್ಲಿ ದಾಖಲಾತಿ 50 ಹಾಗೂ ಹಾಜರಾತಿ 40 ಇರತಕ್ಕದ್ದು.
18. ಕರ್ನಾಟಕ ಶಿಕ್ಷಣ ಮಸೂದೆ ಅನುಚ್ಛೇದ 8 ರಅಡಿಯಲ್ಲಿ ಉಪಬಂಧ 36–39 ರಂತೆ ನೊಂದಾಯಿಸಿದ ಎಲ್ಲ ಶಾಲೆಗಳು ರೆಕಗ್ನೇಷನ್ ಹಾಗೂ ಪ್ರಾವಿಜನಲ್ ರೆಕಗ್ನೇಷನ್ ವ್ಯಾಪ್ತಿಗೆ ಬರುವುದು.
19. ಪ್ರತಿ ವರ್ಷವೂ ವಿದ್ಯಾರ್ಥಿಗಳ ವೈದ್ಯಕೀಯ ಪರೀಕ್ಷೆಯನ್ನು ನಿಯಮಾನುಸಾರ ಮಾಡಿಸತಕ್ಕದ್ದು.
20. ಶಾಲಾ ಕೆಲಸದ ವೇಳೆ ಮತ್ತು ರಜಾ ದಿನಗಳನ್ನು ಇಲಾಖೆಯ ನಿಯಮಗಳಂತೆ ಪಾಲಿಸತಕ್ಕದ್ದು.
21. **ಶಾಲಾ ಮಾಧ್ಯಮ ಬದಲಾವಣೆಯಾದ ಬಗ್ಗೆ ಹಾಗೂ ವಿದ್ಯಾರ್ಥಿಗಳ ದಾಖಲಾತಿಯನ್ನು, ಪ್ರಸ್ತುತ ಶೈಕ್ಷಣಿಕ ವರ್ಷ ಪ್ರಾರಂಭವಾದ ಎರಡು ತಿಂಗಳ ಒಳಗಾಗಿ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ತಿಳಿಸಬೇಕು. ಒಂದು ವೇಳೆ ಶಾಲಾ ಮಾಧ್ಯಮ ಬದಲಾವಣೆ ಮಾಡದಿದ್ದಲ್ಲಿ ಹಾಗೂ ಯಾವುದೇ ಷರತ್ತುಗಳನ್ನು ಪಾಲಿಸದಿದ್ದಲ್ಲಿ ಈ ಆದೇಶವು ತಾನಾಗಿಯೇ ರದ್ದಾಗುವುದು.**
22. ಶಾಲೆಯಲ್ಲಿ ಹೆಣ್ಣು ಮಕ್ಕಳಿಗೆ ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕವಾದ ಶೌಚಾಲಯದ ವ್ಯವಸ್ಥೆಯನ್ನು ಒದಗಿಸಬೇಕು ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ಒದಗಿಸಬೇಕು.
23. ಶಾಲೆಯ ಕಟ್ಟಡ ಸುರಕ್ಷತೆಯ ಬಗ್ಗೆ, ಬೆಂಕಿ, ಬಿರುಗಾಳಿ, ವಿದ್ಯುತ್ ಅಪಘಾತ ಮುತಾಂದ ಅವಘಡಗಳಿಂದ ಸುರಕ್ಷಿತವಾಗಿರತಕ್ಕದ್ದು. ಮತ್ತು ನ್ಯಾಶನಲ್ ಬಿಲ್ಡಿಂಗ್ ಕೋಡ್ ಆಫ್ ಇಂಡಿಯಾ 2005 ರ ಪ್ರಕಾರ ಶಾಲಾ ಕಟ್ಟಡಗಳಲ್ಲಿ ಜಾಗೃತಿ ಕ್ರಮಗಳನ್ನು ತೆಗೆದುಕೊಳ್ಳಬೇಕು.
24. ಶಾಲೆಗಳಲ್ಲಿ ಅಗ್ನಿಶಾಮಕಯಂತ್ರ ಅಳವಡಿಸಿ ಎಲ್ಲ ಶಿಕ್ಷಕರಿಗೆ ಮತ್ತು ಇತರ ಸಿಬ್ಬಂದಿಗೆ ಅದರ ಉಪಯೋಗದ ಬಗ್ಗೆ ತರಬೇತಿ ನೀಡುವದು.
25. ಸಿಬ್ಬಂದಿ ಮಾದರಿ ರಚನೆಯ ಪ್ರಕಾರ ಬೋಧಕ / ಬೋಧಕೇತರ ಸಿಬ್ಬಂದಿಗಳನ್ನು ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಅನುದಾನ ಇಲ್ಲದ ಪ್ರಾಥಮಿಕ ಮತ್ತು ಪ್ರಾಥಮಿಕ ಹಾಗೂ ಪದವಿ ಪೂರ್ವ ಶಿಕ್ಷಣ ಸಂಸ್ಥೆಗಳ ನೌಕರರ ಕೆಲವು ಸೇವಾ ಷರತ್ತು ಮತ್ತು ನಿಬಂಧನೆಗಳು) ನಿಯಮಗಳು, 2005 ರನ್ವಯ ದೊರಕಿಸಬೇಕಾದ ಎಲ್ಲ ಸೇವಾ ಸೌಲಭ್ಯಗಳನ್ನು ಸಿಬ್ಬಂದಿಗಳಿಗೆ ಲಭ್ಯವಾಗುವಂತೆ ಮಾಡತಕ್ಕದ್ದು.
26. ಸರಕಾರದ ಆದೇಶ ಸಂಖ್ಯೆ: ಇಡಿ 104 ಎಸ್ ಇ ಪಿ 2005 ದಿನಾಂಕ:12–01–2006 ಹಾಗೂ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳ ಪ್ರಕಾರ ಶಾಲಾ ಶಿಕ್ಷಕರಿಗೆ ಸೇವಾ ಭದ್ರತೆಒದಗಿಸುವುದು, ಶಿಕ್ಷಕರ ಸೇವಾ ಪುಸ್ತಕ ನಿರ್ವಹಣೆ ಮಾಡುವುದು ಹಾಗೂ ನೇಮಕ ಮಾಡಿಕೊಂಡ ಶಿಕ್ಷಕರಿಗೆ ಕನಿಷ್ಟ ಹಂತದಲ್ಲಿ (ಮೂಲ ವೇತನ) ವನ್ನು ಬ್ಯಾಂಕ ಮೂಲಕ ಪಾವತಿಸತಕದ್ದು.
27. ಸರಕಾರದ ಆದೇಶ ಸಂಖ್ಯೆ: ಇಡಿ 104 ಎಸ್ ಇ ಪಿ 2005 ದಿನಾಂಕ:12–01–2006 ರಂತೆ ಸರ್ಕಾರಿ ಶಿಕ್ಷಣ ಸಂಸ್ಥೆಗಳಿಗೆ ನಿಗದಿಪಡಿಸಲಾದ ವಿದ್ಯಾರ್ಹತೆಯಂತೆ, ಅನುದಾನರಹಿತ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿನ ಹುದ್ದೆಗಳಿಗೂ ಕಡ್ಡಾಯವಾಗಿ ತರಬೇತಿ

ಹೊಂದಿದ ಹಾಗೂ ಇಲಾಖೆಯ ನಿಯಮಗಳ ಪ್ರಕಾರ ಅರ್ಹ ವಿದ್ಯಾರ್ಹತೆ ಹೊಂದಿದ ಶಿಕ್ಷಕರನ್ನು ಮಾತ್ರ ನೇಮಕ ಮಾಡತಕ್ಕದ್ದು.

28. ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ: ಸಿ7[2]:ಪ್ರಾಶಿಅ:ಹೊಶಾಪ್ರಾ:ಅನು:1:2011-12 ದಿನಾಂಕ: 03-05-2012 ರಂತೆ ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆ ಪ್ರಕಾರ 1 ರಿಂದ 5 ನೇ ತರಗತಿಯ ಪ್ರಾಥಮಿಕ ಶಾಲೆಗಳಲ್ಲಿ ಪಿಯುಸಿ, ಟಿಸಿಎಚ್/ಡಿಇಡಿ ವಿದ್ಯಾರ್ಹತೆಯ ಶಿಕ್ಷಕರನ್ನು ಹಾಗೂ ಸುತ್ತೋಲೆ ಸಂಖ್ಯೆ: ಸಿ7(3)ಪ್ರಾ.ಶಿ.ಅ.ಟಿ.ಇ.ಟಿ/ ಸುತ್ತೋಲೆ/06/2014-15 ದಿನಾಂಕ: 9-6-2014 ರ ಸುತ್ತೋಲೆಯಂತೆ ನಿಯಮಾನುಸಾರ ಶಿಕ್ಷಕರನ್ನೇ ಕಡ್ಡಾಯವಾಗಿ ನಿಯಮಾನುಸಾರ ಆಂಗ್ಲ ಮಾಧ್ಯಮದಲ್ಲಿ ಅಧ್ಯಯನ ಮಾಡಿದ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳತಕ್ಕದ್ದು.
29. ಕರ್ನಾಟಕ ಶಿಕ್ಷಣ ಮಸೂದೆ ನಿಯಮಗಳ ಪ್ರಕಾರ ಶಾಲೆಗೆ ಬೇಕಾದ ಪೀಠೋಪಕರಣ, ಪಾಠೋಪಕರಣ, ಗ್ರಂಥಾಲಯ ಪುಸ್ತಕಗಳು ಆಟದ ಮೈದಾನ ಶಾಲಾ ಕಟ್ಟಡ ಮುಂತಾದ ಸೌಲಭ್ಯಗಳನ್ನು ಹೊಂದಿರತಕ್ಕದ್ದು.
30. ಪ್ರತಿ ಶಿಕ್ಷಣ ಸಂಸ್ಥೆ ಪ್ರತಿ ವರ್ಷ ಚಾರ್ಟರ್ಡ ಅಕೌಂಟೆಂಟ್‌ರಿಂದ ಪ್ರಮಾಣೀಕೃತ ಲೆಕ್ಕ ಪತ್ರಗಳನ್ನು ಹೊಂದಿರತಕ್ಕದ್ದು.
31. ಶಾಲೆಯು ವಿದ್ಯಾರ್ಥಿಗಳ ಪ್ರವೇಶಗಳ ನಿಬಂಧನೆಗಳು ಮತ್ತು ವಿದ್ಯಾರ್ಥಿಗಳ ಶುಲ್ಕ ವಸೂಲಾತಿ ಈ ಬಗ್ಗೆ ಇಲಾಖೆಯ ನಿಯಮಾವಳಿಗಳನ್ವಯ ಫೀ ವಸೂಲಾತಿ ಮಾಡತಕ್ಕದ್ದು.
32. ಶಾಲೆ ಮತ್ತು ಶಾಲಾ ಆವರಣ, ಶಾಲೆಗಳಲ್ಲಿಯ ಮಕ್ಕಳ ಪ್ರವೇಶ ದಾಖಲಾತಿಗಳು ಎಲ್ಲರಿಗೂ ಮುಕ್ತವಾಗಿರತಕ್ಕದ್ದು.
33. ಶಾಲಾ ಕಟ್ಟಡವು ಪರೀಕ್ಷೆಗಳು, ತರಬೇತಿ, ಜನಗಣತಿ ಇತ್ಯಾದಿ ಇಲಾಖಾ ಕಾರ್ಯಗಳಿಗೆ ಲಭ್ಯವಾಗಿರತಕ್ಕದ್ದು.
34. ಕರ್ನಾಟಕ ಶಿಕ್ಷಣ ಸಂಸ್ಥೆಗಳು [ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯಕ್ರಮಣ] ನಿಯಮಗಳು 1995 ರಲ್ಲಿ ತಿಳಿಸಿರುವ ಎಲ್ಲಾ ಸೌಲಭ್ಯಗಳನ್ನು ಒದಗಿಸತಕ್ಕದ್ದು.
35. ಸಂಸ್ಥೆಯ ಆಡಳಿತ ಮಂಡಳಿಯು ಮೇಲೆ ತಿಳಿಸಿರುವ ನಿಯಮಗಳಂತೆ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಬೇಕು..
36. ಸರ್ಕಾರದ ಆದೇಶ ಸಂಖ್ಯೆ:ಇಡಿ 369 ಪಿಜಿಸಿ 2014 ದಿ:11-11-2014 ರಂತೆ ಸಂಸ್ಥೆಯ ಕಾರ್ಯದರ್ಶಿ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಜಂಟಿ ಹೆಸರಿನಲ್ಲಿ ನಿಯಮಾನುಸಾರ ನಿಗದಿಪಡಿಸಿದಂತೆ ಸ್ಥಿರನಿಧಿಯನ್ನು ಶಾಲೆ ಪ್ರಾರಂಭಿಸುವುದಕ್ಕಿಂತ ಮುಂಚಿತವಾಗಿ ಇಡತಕ್ಕದ್ದು
37. **ಶಾಲೆ ಪ್ರಾರಂಭವಾದಾಗನಿಂದ ಸನ್ 2017-18 ನೇ ಸಾಲಿನ ವರೆಗೆ ಕನ್ನಡ ಮಾಧ್ಯಮದಲ್ಲಿ ನಡೆಸಲಾದ ದಾಖಲಾತಿ ರಜಿಸ್ಟರ್ ಹಾಗೂ ಅಗತ್ಯ ದಾಖಲೆಗಳನ್ನು ಸುರಕ್ಷಿತವಾಗಿ ಇಟ್ಟುಕೊಳ್ಳುವುದು. ಹಾಗೂ ಕನ್ನಡ ಮಾಧ್ಯಮದಲ್ಲಿ ವಿದ್ಯಾಬ್ಯಾಸ ಮಾಡಿದ ವ್ಯಾಸಂಗ ಪ್ರಮಾಣ ಪತ್ರ ಹಾಗೂ ಗ್ರಾಮೀಣ ಪ್ರಮಾಣ ಪತ್ರಗಳನ್ನು ಹಾಗೂ ಇನ್ನಿತರ ದಾಖಲೆಗಳನ್ನು ಇಲಾಖಾ ನಿಯಮಾವಳಿ ಪ್ರಕಾರ ವಿದ್ಯಾರ್ಥಿಗಳಿಗೆ ನೀಡುವ ಷರತ್ತು ವಿಧಿಸಲಾಗಿದೆ. ಹಾಗೂ ಎಲ್ಲ ದಾಖಲೆಗಳನ್ನು ಸುರಕ್ಷಿತವಾಗಿ ರಕ್ಷಿಸುವ ಜವಾಬ್ದಾರಿ ಸಂಸ್ಥೆಯವರ ಜವಾಬ್ದಾರಿಯಾಗಿರುತ್ತದೆ.**
38. ನೋಂದಣಿ ಮಾರ್ಪಾಡು ಪ್ರಸ್ತಾವನೆಯೊಡನೆ ಸಲ್ಲಿಸಿದ ದಾಖಲೆಗಳು ಸತ್ಯಕ್ಕೆ ದೂರವಾದದ್ದೆಂದು ಯಾವುದೇ ಸಂದರ್ಭದಲ್ಲಿ ಕಂಡು ಬಂದಲ್ಲಿ ಈ ನೋಂದಣಿ ಮಾರ್ಪಾಡು ಪ್ರಮಾಣ ಪತ್ರವನ್ನು ರದ್ದುಪಡಿಸುವ ಅಧಿಕಾರವನ್ನು ಈ ಕೆಳಕಂಡ ಸಹಿದಾರರು ಹೊಂದಿರುತ್ತಾರೆ.

**(ಎಂ ಜಿ ದಾಸರ)**
**ಉಪನಿರ್ದೇಶಕರು (ಆಡಳಿತ),**
**ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಕ್ಕೋಡಿ**

ಸ್ಥಳ : **ಚಿಕ್ಕೋಡಿ**
ದಿನಾಂಕ : 10-07-2018.

ಗೆ,

1. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಹುಕ್ಕೇರಿ
2. ಅಧ್ಯಕ್ಷರು/ಕಾರ್ಯದರ್ಶಿಗಳು, **ಯಮಕನಮರಡಿ ವಿದ್ಯಾವರ್ಧಕ ಸಂಘ ಯಮಕನಮರಡಿ ತಾ::ಹುಕ್ಕೇರಿ ಜಿ::ಬೆಳಗಾವಿ**
3. ಕಛೇರಿ ಪ್ರತಿ.

<u>ಪ್ರತಿ ಗೌರವಪೂರ್ವಕವಾಗಿ ಮಾಹಿತಿಗಾಗಿ:</u>

1. ಮಾನ್ಯ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಧಾರವಾಡ ಇವರಿಗೆ ಸಲ್ಲಿಸಲಾಗಿದೆ.